ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अप्रैल-जून २०१७

त्रैमासिक पत्रिका

102. ಪ್ರೊ. ಎಂ.ಎಸ್. ಮಾಗಣಗೇರಿ
C/o ಪ್ರೊ. ಎಂ.ಎಸ್.ಝುಳಕಿ
ಮನೆ ನಂ.65 ಕೆ.ಎಚ್. ಕಾಲೋನಿ
ಸೋಲಾಪುರ ರಸ್ತೆ ವಿಜಯಪುರ-586103



# ಪರಿವಿಡಿ


| | | | |
|---|---|---|---|
| ೧. | ರೋಮಾಂಚಕಾರಿ ದೃಶ್ಯಗಳು (ಅಮೇರಿಕ ಪ್ರವಾಸ ಕಥೆ) | • ಡಾ. ಎಸ್. ಟಿ. ಮೇರವಾಡೆ | ೨೮ |
| ೨. | ಕನ್ನಡ ಭಾಷಾ ಕೌಶಲ್ಯ | • ಪ್ರೊ. ಆರ್. ವಿ. ಪಾಟೀಲ | ೩೬ |
| ೩. | ಚಿನ್ನೋಬನಹಳ್ಳಿಯ ಕಂಚಿ ಓಬಳೇಶ್ವರ ಜಾತ್ರೆಯ ವಿಶ್ಲೇಷಣೆ | • ರಾಜಣ್ಣ ಡಿ. | ೩೮ |
| ೪. | ಭಾಷಾ ಪಠ್ಯಕ್ರಮ : ಬದಲಾವಣೆಯ ಅವಶ್ಯಕತೆ | • ಡಾ. ಸಿ. ಎಂ. ತಳವಾರ | ೪೩ |
| ೫. | ಹಂಪಾಪುರದ 'ಕಂಬದ ಹಬ್ಬ'ದ ವೈಶಿಷ್ಟ್ಯತೆ | • ಆನಂದಕುಮಾರ ಎಚ್. | ೪೮ |
| ೬. | ಜನಪದ ಸಾಹಿತ್ಯದಲ್ಲಿ ತಾಯಿ | • ಡಾ. ವಾಯ್. ವಾಯ್. ಕೊಕ್ಕನವರ | ೫೧ |
| ೭. | ಕುಂದಗನ್ನಡ ಭಾಷಿಕ ವಿಶ್ಲೇಷಣೆ | • ಪ್ರೊ. ಕೆ. ಪ್ರಹ್ಲಾದ | ೫೪ |
| ೮. | ಶಿವಶರಣ ಹಾವಿನಹಾಳ ಕಲ್ಲಯ್ಯ | • ಡಾ. ಉಷಾದೇವಿ ಉದಯ ಹಿರೇಮಠ | ೬೦ |
| ೯. | ಕುಂ. ವೀ.ಯವರ 'ಶಾಮಣ್ಣ' | • ಕು. ಭೀಮವ್ವ ಅ. ಹೂಗಾರ | ೬೬ |
| ೧೦. | ಡಾ. ಸಿದ್ಧಲಿಂಗಯ್ಯನವರ 'ಊರು ಕೇರಿ' | • ಡಾ. ಎಂ. ಎಸ್. ಮಾಗಣಗೇರಿ | ೬೯ |

## ಡಾ. ಸಿದ್ಧಲಿಂಗಯ್ಯನವರ 'ಊರು ಕೇರಿ'

• ಡಾ. ಎಂ. ಎಸ್. ಮಾಗಣಗೇರಿ

**ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ**
**ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ!**
**ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ**
**ವಸುಧೆಯೊಳಗಾತನೇ ಗಾರುಡಿಗ ಕಣಾ ರಾಮನಾಥಾ**
**– ಜೇಡರ ದಾಸಿಮಯ್ಯ**

ಆತ್ಮಕಥನವೆಂದರೆ ವ್ಯಕ್ತಿಯೊಬ್ಬನು ಹುಟ್ಟಿ-ಬೆಳೆದ ತೀರಾ ಖಾಸಾ ವಿಷಯಗಳ ಚಿತ್ರಣವಾಗಬೇಕಿಲ್ಲ. ಅಂದರೆ ಅದೊಂದು ಸಾಹಿತ್ಯ ಕೃತಿಯಾಗಿ ವ್ಯಕ್ತಿಯ ಜೀವನದಿಂದ ಆಯ್ದುಕೊಂಡ ವಿಶಿಷ್ಟ ವಿಷಯಗಳನ್ನು ಹೊಂದಿರುವದಾಗಿದೆ. ಒಬ್ಬ ದಲಿತ ವ್ಯಕ್ತಿ (ಕವಿ)ಯು ತನ್ನ ಬದುಕಿನ ವಿವಿಧ ಚಿತ್ರಣಗಳನ್ನು ಸರಮಾಲೆಯಾಗಿ ಜೋಡಣೆಗೊಂಡಿರುವುದೇ "ಊರು-ಕೇರಿ." ಇದು ಸಿದ್ಧಲಿಂಗಯ್ಯನವರ ಆತ್ಮಕಥೆಯ ಜೀವನದ ಹಸಿವು, ಬಡತನ, ಸ್ವಾಭಿಮಾನದ ಪ್ರಸಂಗಗಳು ಬರೀ ಅವರ ಖಾಸಗಿ ಕಥನವಾಗಿರದೆ, ದಲಿತ ಸಮುದಾಯದ ಕಥನಗಳಾಗಿ ನಿಲ್ಲುತ್ತವೆ. ಯಾರಾದರೂ ಊರು ಕೇರಿ ಎಂದಾಗ ನಮಗೇನೂ ಅನ್ನಿಸುವುದಿಲ್ಲ. ಆದರೆ ಅದರಲ್ಲಿರುವ ವಿಷಯವನ್ನು ಓದಿದಾಗ ಮಾತ್ರ ಅದಕ್ಕೊಂದು ಅರ್ಥ ಬರುವದು. ಡಾ. ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥನಕ್ಕೆ 'ಊರು-ಕೇರಿ' ಎಂದು ಹೆಸರಿಟ್ಟಿರುವದು ಸಮರ್ಥನೀಯವಾಗಿದೆ. ಡಾ. ಸಿದ್ಧಲಿಂಗಯ್ಯನವರ ಆತ್ಮಕಥನ ಊರು ಕೇರಿಯನ್ನು ಕುರಿತು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯನವರು ಸಮರ್ಥ ರೀತಿಯಲ್ಲಿ ವಿಮರ್ಶಿಸಿದ್ದಾರೆ. ಅದರಂತೆ ಶ್ರೀಮತಿ ಸುಕನ್ಯಾ ಮಾರುತಿ, ಶ್ರೀ ಜಿ. ಕೆ. ರವೀಂದ್ರ ಕುಮಾರ ಸಹ ವಿಮರ್ಶಿಸಿರುವುದು ಶ್ಲಾಘನೀಯ.

### ಕನ್ನಡದಲ್ಲಿ ಆತ್ಮಕತೆ :

ಕನ್ನಡದಲ್ಲಿ ಆತ್ಮಕತೆಯ ಪ್ರಕಾರಕ್ಕೆ ಇನ್ನೂ ಒಂದು 'ಚರಿತ್ರೆ' ಇಲ್ಲ. ಆತ್ಮಕಥನ ಸಾಹಿತ್ಯವನ್ನು ಚರ್ಚಿಸುವಷ್ಟು ಅದಿನ್ನೂ ಬೆಳೆದಿಲ್ಲ. ಇದುವರೆಗಿನ ಆತ್ಮಕಥನಗಳು ಒಂದು ಬಗೆಯ ದಾಖಲೆಯ ಬರವಣಿಗೆಗಳೇ ಹೊರತು ಸೃಜನಶೀಲ ಬರವಣಿಗೆಯಲ್ಲ. 'ಆತ್ಮಕಥೆ' ಒಂದು ಹಂತ ತಲುಪಿದ ನಂತರದ ಕತೆ. ಉದಾ: ಕುವೆಂಪುರವರ 'ನೆನಪಿನ ದೋಣಿಯಲ್ಲಿ' ಶಿವರಾಂ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಒಂದು ರೀತಿಯಲ್ಲಿ ಆತ್ಮಕತೆ ಸೃಜನಶೀಲತೆಯ ಆಚೆಗಿನ ವಿವರಗಳ ಮಾಹಿತಿ ಸಂಗ್ರಹ. ಆದ್ದರಿಂದಲೇ ಆತ್ಮಕತೆ ನಮ್ಮಲ್ಲಿ (ಕನ್ನಡದಲ್ಲಿ) ಬಿಡುವಿನ ಬರವಣಿಗೆಯಾಗಿದೆ. ಆದಾಗ್ಯೂ ಹಲವಾರು ದಲಿತ ಲೇಖಕರು ತಮ್ಮ ಆತ್ಮಕಥೆಗಳನ್ನು ನೈಜವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆ ಮೂಲಕ ದಲಿತ ಆತ್ಮಕಥೆ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಸಿದ್ಧಲಿಂಗಯ್ಯನವರ 'ಊರುಕೇರಿ' ಭಾಗ ೧-೨, ಅರವಿಂದ ಮಾಲಗತ್ತಿಯವರ 'ಗೌರ್ನಮೆಂಟ್ ಬ್ರಾಹ್ಮಣ', ತುಂಬಾಡಿ ರಾಮಯ್ಯನವರ 'ಮಣೆಗಾರ' ಗೋವಿಂದರಾಜು ಅವರ 'ಮನವಿಲ್ಲದವರ ಮಧ್ಯೆ', ಮುನಿವೆಂಕಟಪ್ಪನವರ 'ಅಂತ್ಯಜನ ಅಂತರಂಗ', ಸಿಜಿಕೆ ಅವರ 'ಕತ್ತಲೆ ಬೆಳದಿಂಗಳೊಳಗ' ಮೊದಲಾದವರ ಆತ್ಮಕಥೆಗಳನ್ನು ಇಲ್ಲಿ ಹೆಸರಿಸಬಹುದು. ಈ ಎಲ್ಲಾ ದಲಿತ ಸಾಹಿತಿಗಳು ದಲಿತ ಚಳುವಳಿಯ ಮೂಸೆಯಲ್ಲಿ ಅರಳಿದ ದಲಿತ ಪ್ರತಿಭೆಗಳು.

### ಮರಾಠಿಯಲ್ಲಿ ಆತ್ಮಕಥೆ :

ಮರಾಠಿಯಲ್ಲಿ ಆತ್ಮಕಥನಗಳ ಒಂದು ಪರಂಪರೆಯೇ ಇದೆ. ಅಂದರೆ ಮರಾಠಿ ಭಾಷೆಯಲ್ಲಿ ಅನೇಕ ಕವಿಗಳು

 ISSN : 2320-0391 

RNI Regd. No. KARBIL/2014/54464



एक आदमी रोटी बेलता है
एक आदमी रोटी खाता है
एक तीसरा आदमी भी है
जो न रोटी बेलता है, न रोटी खाता है
वे सिर्फ रोटी से खेलता है
मैं पूछता हूँ–
यह तीसरा आदमी कौन है ?
मेरे देश का संसद मौन है।

– सुदामा पाण्डेय 'धूमिल'

ರೊಟ್ಟಿ ಮಾಡುವನೊಬ್ಬ
ರೊಟ್ಟಿ ತಿನ್ನುವನೊಬ್ಬ
ಮೂರನೆಯವನೂ ಇದ್ದಾನೆ
ಆತ ರೊಟ್ಟಿ ಮಾಡುವುದಿಲ್ಲ, ತಿನ್ನುವುದೂ ಇಲ್ಲ
ಕೇವಲ ರೊಟ್ಟಿಯಿಂದ ಆಟವಾಡುತ್ತಾನೆ
ನಾನು ಕೇಳುವೆ –
ಈ ಮೂರನೆಯವನು ಯಾರು?
ನನ್ನ ದೇಶದ ಸಂಸತ್ತು ಮೌನ.

– ಸುದಾಮಾ ಪಾಂಡೆಯ 'ಧೂಮಿಲ'

ISSN 2320-0391

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर – ५८६१०३ (कर्नाटक)

सौ

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ.
ದರ್ಗಾ ಜೇಲ ಮುಂದೆ.
ವಿಜಯಪುರ – ೫೮೬೧೦೩ (ಕರ್ನಾಟಕ)